**ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ನರಸಿಂಹರಾಜ ಚೌಕ, ಬೆಂಗಳೂರು-560002.**
**ದೂರವಾಣಿ : 080-22237455 / 080-22221286, ಫ್ಯಾಕ್ಸ್ : 080-22223194**
**ಇ-ಮೇಲ್ : comm@bbmp.gov.in**

ಸಂಖ್ಯೆ:ಆ/ಆಶಾ/ಪಿಆರ್/108(3)/2020-21 ದಿನಾಂಕ: 27-06-2020

# ಅಧಿಸೂಚನೆ

ಅಂತರ ಜಿಲ್ಲೆಗಳು ಮತ್ತು ಅಂತರ ರಾಜ್ಯಗಳಾದ್ಯಂತ ಆರ್ಥಿಕತೆ ಮತ್ತು ಜನರ ಚಾಲನೆಗೆ ಅವಕಾಶ ನೀಡಿರುವುದರಿಂದ ಕೋವಿಡ್-19 ಪ್ರಕರಣಗಳು ಉಲ್ಬಣವಾಗುತ್ತಿದೆ. ಬೆಂಗಳೂರು ನಗರವು (ಬಿಬಿಎಂಪಿ ಮತ್ತು ಸುತ್ತಮುತ್ತಲಿನ) ರಾಜ್ಯದ ಆರ್ಥಿಕ ಕೇಂದ್ರವಾಗಿದ್ದು ಇಲ್ಲಿಗೆ ಆಗಮಿಸುವ ಪ್ರಯಾಣಿಕರ ಸಂಖ್ಯೆಯು ಹೆಚ್ಚಾಗಿರುತ್ತದೆ. ಜೊತೆಗೆ ಸುತ್ತಮುತ್ತಲಿನ ಜಿಲ್ಲೆಗಳು ವೈದ್ಯಕೀಯ ಸೌಲಭ್ಯಗಳಿಗಾಗಿ ಬೆಂಗಳೂರನ್ನು ಅವಲಂಬಿಸಿವೆ.

ಕೋವಿಡ್-19 ರೋಗಿಗಳನ್ನು ನಿರ್ವಹಿಸಲು ಮೂರು ರೀತಿಯ ಸೌಲಭ್ಯಗಳ ಯೋಜನೆಯನ್ನು ರೂಪಿಸಲಾಗಿದೆ. ಅವುಗಳೆಂದರೆ, ಕೋವಿಡ್ ಆರೈಕೆ ಕೇಂದ್ರ (COVID Care Center - CCC) - ಸೋಂಕಿನ ಲಕ್ಷಣ ರಹಿತ ವ್ಯಕ್ತಿಗಳನ್ನು ನಿರ್ವಹಿಸಲು ಉದ್ದೇಶಿಸಲಾಗಿದೆ, ಮೀಸಲಾದ ಕೋವಿಡ್ ಆರೋಗ್ಯ ಕೇಂದ್ರ (Dedicated COVID Health Center - DCHC) - ಸೌಮ್ಯದಿಂದ ಮಧ್ಯಮ ಲಕ್ಷಣಗಳ ವ್ಯಕ್ತಿಗಳನ್ನು ನಿರ್ವಹಿಸಲು ಉದ್ದೇಶಿಸಲಾಗಿದೆ ಮತ್ತು ಮೀಸಲಾದ ಕೋವಿಡ್ ಆಸ್ಪತ್ರೆಗಳು (Dedicated COVID Hospitals - DCH) - ಗಂಭೀರವಾಗಿರುವ ರೋಗಿಗಳನ್ನು ನಿರ್ವಹಿಸಲು ಉದ್ದೇಶಿಸಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ SOP No. HFW 216 ACS 2020 dtd: 19.06.2020 ರ ಪ್ರಕಾರ ಕೋವಿಡ್ ಆರೈಕೆ ಕೇಂದ್ರ (CCC) ಗಳಲ್ಲಿ ಕೋವಿಡ್-19 ವೈರಾಣು ಸೋಂಕಿನ ಲಕ್ಷಣ ರಹಿತ ವ್ಯಕ್ತಿಗಳನ್ನು ನಿರ್ವಹಿಸಬೇಕಾಗಿರುತ್ತದೆ. ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಬೆಂಗಳೂರು ನಗರ ಮತ್ತು ಸುತ್ತ ಮುತ್ತ ಕೋವಿಡ್ ಆರೈಕೆ ಕೇಂದ್ರ (CCC) ಗಳನ್ನು ಹೆಚ್ಚಿಸುವ ಅಗತ್ಯ ಇರುತ್ತದೆ. ಆದ್ದರಿಂದ, ಸಾಂಕ್ರಾಮಿಕ ರೋಗಗಳ ಕಾಯ್ದೆ-1897 (Epidemic Diseases Act-1897 (Central Act 3 of 1897)) -ರ ಅಡಿ ಈ ಕೆಳಕಂಡ ಸಂಸ್ಥೆಗಳನ್ನು ಕೋವಿಡ್ ಆರೈಕೆ ಕೇಂದ್ರ(CCC) ಗಳನ್ನಾಗಿ ಅಧಿಸೂಚಿಸಿದೆ.

1. ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆ, ಬೆಂಗಳೂರು (200 ಹಾಸಿಗೆಗಳು).
2. ಜಿ.ಕೆ.ವಿ.ಕೆ. ಕೃಷಿ ವಿದ್ಯಾರ್ಥಿ ನಿಲಯಗಳು, ವಿಶ್ವವಿದ್ಯಾಲಯ ಆವರಣ (600 ಹಾಸಿಗೆಗಳು).
3. ಜಿ.ಕೆ.ವಿ.ಕೆ. ತೋಟಗಾರಿಕೆ ವಿದ್ಯಾರ್ಥಿ ನಿಲಯಗಳು, ವಿಶ್ವವಿದ್ಯಾಲಯ ಆವರಣ (400 ಹಾಸಿಗೆಗಳು).
4. ಹೋಟೆಲ್ ಸಿಟಿ ಸೆಂಟೋರ್ ಇಂಟರ್‌ನ್ಯಾಷನಲ್, ಮೆಜೆಸ್ಟಿಕ್, ಬೆಂಗಳೂರು (200 ಹಾಸಿಗೆಗಳು).
5. ಚಾನ್ಸರಿ ಪೆವಿಲಿಯನ್, ರೆಸಿಡೆನ್ಸಿ ರಸ್ತೆ, ಬೆಂಗಳೂರು (200 ಹಾಸಿಗೆಗಳು).

ಮೇಲ್ಕಾಣಿಸಿದ ಸಂಸ್ಥೆ/ಸೌಲಭ್ಯ ಕೇಂದ್ರದ ಆಡಳಿತ ವಿಭಾಗದ ಮುಖ್ಯಸ್ಥರುಗಳು, ಜಂಟಿ ಆಯುಕ್ತರು(ಘನತ್ಯಾಜ್ಯ ನಿರ್ವಹಣೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರೊಂದಿಗೆ ಸಂಪರ್ಕಿಸಿ ಸೂಚಿಸಲಾದ

ಮು.ಪು.ನೋ

ಸ್ಥಳಗಳನ್ನು ಆರೈಕೆ ಕೇಂದ್ರಗಳನ್ನಾಗಿ ಪರಿವರ್ತಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಮತ್ತು ಕೋವಿಡ್ ಸೋಂಕಿತರ ಆರೈಕೆಗೆ ಬೇಕಾದ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು, ಸಿಬ್ಬಂದಿ, ಸಂಪನ್ಮೂಲ ಇತ್ಯಾದಿಗಳನ್ನು ಒದಗಿಸಲು ಸೂಚಿಸಲಾಗಿದೆ. ಸಂಸ್ಥೆಯು ಕಾಲಕಾಲಕ್ಕೆ ಸರ್ಕಾರವು ಹೊರಡಿಸುವ ನಿರ್ದೇಶನಗಳು/ಶಿಷ್ಟಾಚಾರ ನಿಯಮಗಳು/ಪ್ರಮಾಣಿತ ಕಾರ್ಯಾಚರಣೆ ವಿಧಾನ (Standard Operating Procedures) ಗಳಿಗೆ ಬದ್ಧವಾಗಿರುತ್ತದೆ.

ಸದರಿ ಅಧಿಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಲು ಆದೇಶಿಸಿದೆ.

ಆಯುಕ್ತರು 27/6/2020

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಆ/ಆಶಾ/ಪಿಆರ್/ 108(3)/2020-21 ದಿನಾಂಕ: 27-06-2020